191(2)

CONQUER
GENERAL
SEXUAL
DEBILITIES
WITH
SHAKTI
SUDHA

Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 28 ಸಂಚಿಕೆ 122] ಶನಿವಾರ 3—2—45 [3 ಪೈ

ಚಿನ್ನ, ಬೆಳ್ಳಿ, ಪಚ್ಚೆಪೆಗಳು,
ಅಮಶಂಖೆಗೆ ಖಾತ್ರಿ ಗುಣಕಾರಿ
ಡಿ ಸೆ ಂ ಟಿ ಸೈ ಡ್
ಮ ಶ್ತು
ಝಾಂಡಳಂಪೆನಿಯ ಔಷಧಿಗಳು
ಬೇ ಕಾ ದ ರೆ
ಕಾಂತರಾಜ್ & ಕೋ.
ರವೆ ಬೀದಿ, ಮೈಸೂರು.

ಸಂಸ್ಥಾನದ ಸುದ್ದಿಗಳು

ಹಾರ್ನಹಳ್ಳಿಯಿಂದ ಅರಸೀಕೆರೆಗೆ ದೇವರ ಉತ್ಸವಕ್ಕೆ ಒಂದು ಎತ್ತಿನ ಗಾಡಿಯಲ್ಲಿ 11 ಮಂದಿ ಹೋಗುತ್ತಿದ್ದಾಗ, ಎಳೆವಾರು ಕೆರೆ ಏರಿಮೇಲೆ ಒಂದು ಹಕ್ಕಿ ಹಾರಿತು. ಎತ್ತುಗಳು ಬೆದರಿ ಗಾಡಿಯನ್ನು ಕೆರೆಗೆ ಎಳೆದುಕೊಂಡುಹೋದ ಪ್ರಯುಕ್ತ 6 ಮಂದಿ ನೀರಿನಲ್ಲಿ ಮುಳುಗಿ ಪ್ರಾಣಬಿಟ್ಟರು.

ಮೈಸೂರು ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರಿಗೆ 3 ತಿಂಗಳು ರಜಾ ಮಂಜೂರಾಗಿದೆ.

ಬೆಂಗಳೂರಿನ ನೀರಿನ ಸರಬರಾಜನ್ನು ಉತ್ತಮಪಡಿಸಲು ಪೌರ ಸಭೆಯವರು 4 ಲಕ್ಷ ರೂ. ಮಂಜೂರ್ಮಾಡಿರುವರು.

ಕೃಷ್ಣರಾಜನಗರದ ನೀರಿನ ವ್ಯವಸ್ಥೆಗಾಗಿ ಸರ್ಕಾರವವರು ರೂ. 25000 ಮಂಜೂರ್ಮಾಡಿರುವರು.

ಮೈಸೂರಿಗೆ ದಯಮಾಡಿಸಿದ್ದ ದಿವಾನರು ನಿನ್ನೆ ಸಾಯಂಕಾಲ ಬೆಂಗಳೂರಿಗೆ ಒಂದಿರುಗಿದರು.

ಈ ತಿಂಗಳು 1 ನೇ ತಾರೀಖಿನಿಂದ ಸಕ್ಕರೆ, ಸೋಜಿ, ಅಟ್ಟು, ಮೈದಾವನ್ನು ವೀಸೆಗೆ 120 ತೊಲದಂತೆ ತೂಕಮಾಡಿ ಕೊಡಬೇಕು ; ವೀಸೆಗೆ ಸೋಜಿ ಮೈದ 10 ಆಣೆ ಗೋಧಿಹಿಟ್ಟು ಅಟ್ಟು 0-6-9 ದಂತೆ ಮಾರಬೇಕೆಂದು ಆಜ್ಞೆಯಾಗಿದೆ.

15-10-45 ಮಹಾನವಮಿ ಪ್ರಯುಕ್ತ ರಜಾವೆಂದು ಭಾವಿಸಬೇಕೆಂದು ಸರ್ಕಾರಿ ಆಜ್ಞೆಯಾಗಿದೆ.

ಏಕಾರಿಗಳನ್ನೂ ಪಿಂಜಾರಿಗಳನ್ನೂ ನಿನ್ನ ವರ್ಗಕ್ಕೆ ಸೇರಿಸಬಾರದೆಂದೂ ಅವರು ಮುಸ್ಲಿಂ ಸಂಗಡದವರೆಂದೂ ಸರಕಾರಿ ಆಜ್ಞೆಯಾಗಿದೆ.

ಶಾಂತಿ ಸಂಧಾನಕ್ಕೋ ತಲೆತಪ್ಪಿಸಿಕ್ಕೊಳ್ಳುವುದಕ್ಕೋ

ಜರ್ಮನಿಯಿಂದ ಬಂದ ವಾರ್ತೆಯಂತೆ, ಎಂಡು ಜರ್ಮನ್ ಮಿಲಿಟರಿ ವಿಮಾನಗಳಲ್ಲಿ ಎಂಟು ಮಂದಿಗೆ ಬೇಕಾದಷ್ಟು ಆಹಾರ, 40 ಗಂಟೆ ಹೋಗಲು ಸಾಕಷ್ಟು ಪೆಟ್ರೋಲು ಸಮೇತ ರಭಸದಿಂದ ಹೊರಡಲು ಬೆರಿಯಾದಲ್ಲಿ ಸಿದ್ಧವಾಗಿತ್ತು. ಆ ವಿಮಾನಗಳ ಸುತ್ತಲೂ ಒಲವಾದ ಕಾವಲಿಟ್ಟಿದೆ. ಪ್ರಯಾಣೀಕರು ಯಾರು ? ಎಲ್ಲಿಗೆ ? ಉದ್ದೇಶವೇನು ? ಈ ವಿಷಯಗಳು ಇನ್ನೂ ಸತ್ಯವಾಗಿಲ್ಲ ಎಂದು ಜಾರಿಚ್ಚಿನ ಡೇಲಿ ಬಾತ್ಮೀದಾರರು ತಂತೀವಾರ್ತೆ ಕಳುಹಿಸಿರುತ್ತಾರೆ.

ಂ ಂ

ಜರ್ಮನರು ಒಂದು ಸೂತನ ಸಬ್ ಮೆರಿನ್ ತಯಾರ್ಮಾಡಿರುವರು. ಇದು ನೀರಿನಲ್ಲೇ 20-30 ದಿವಸ ಇರಬಹುದಂತೆ.

ಂ ಂ

ಪಂಜಾಬಿನ ಭಕ್ರ ಜಲಾಶಯವನ್ನು 30 ಕೋಟಿ ರೂ. ಅಂದಾಜಿನಲ್ಲಿ ತಯಾರ್ಮಾಡಲು ಸರ್ಕಾರವು ಒಪ್ಪಿ ಒಬ್ಬ ಅಮೇರಿಕನ್ ನಿಪುಣನ ಕೈಲಿ ಅಂದಾಜು ಪಟ್ಟಿ ತಯಾರಿಸಿದರು. ಕೆಲಸಕ್ಕೆ ಯಂತ್ರಗಳು ಅಮೇರಿಕಾದಿಂದ ಬರುವವು.

ಂ ಂ

ಅಸ್ಟ್ರೇಲಿಯಾದಲ್ಲಿ ಕೈಗಾರಿಕೆಯನ್ನು ನೋಡಿಕೊಂಡುಬರಲು ಬಾರತದಿಂದ 6 ಮಂದಿಯನ್ನು ಕಳುಹಿಸುವರು. ಅವರಲ್ಲಿ ಮೈಸೂರಿನ ಬಿ. ವಿಶ್ವನಾಥನ್ನರು ಒಬ್ಬರು.

ಗಾಂಧೀಜೀ ಫೋಟೋವನ್ನು ಪೆರವಣಿಗೆ ಮಾಡುವುದು ಅಪರಾಧವಲ್ಲವೆಂದು ಮದರಾಸು ಹೈ ಕೋರ್ಟಿನಲ್ಲಿ ತೀರ್ಪಾನವಾಗಿ ಇಬ್ಬರು ಬಾಲಕರಿಗೆ ಖುಲಾಸಾಯಿತು.

ಂ ಂ

ಹಾರನ್‌ಗಳಿಗೆ ಅಭಾವವಾದ್ದರಿಂದ ಮಿಲಿಟರಿ ಲಾರಿಗಳು ಹಾರ್ನ್ ಮಾಡಲು ಅವಕಾಶವಿಲ್ಲ. ಪಾದಚಾರಿಗಳು ಫುಟ್ ಪಾತಿನಲ್ಲೇ ಓಡಾಡಬೇಕು. ಹಿಂದೆ ಮುಂದೆ ನೋಡಿ ರಸ್ತೆಬದಲಾಯಿಸಿಕೊಳ್ಳಿ ಎಂದು ವಿಶಾಖಪಟ್ಟಣದ ಮ್ಯಾಜಿಸ್ಟ್ರೇಟರು ಆಜ್ಞೆ ಮಾಡಿರುತ್ತಾರೆ.

ಂ ಂ

ಯುದ್ಧಾನಂತರ ಎಲ್ಲಾ ದೇಶಗಳೂ ಋಣಗಾರರಾಗುವರು. ಭಾರತವೂ ಅಮೇರಿಕ ಸಂಯುಕ್ತ ಸಂಸ್ಥಾನ ಮಾತ್ರ ಸಾಲಗಾರರಾಗದೇ ಇರುತ್ತಪಲ್ಲದೆ ಲೇನೇದಾರರೂ ಆಗುವವು.

ಂ ಂ

ಸೋಲಾಪುರದಲ್ಲಿ ಹಾಲಿನ ಉಪಯೋಗದ ಬಗ್ಗೆ ಸ್ವಲ್ಪ ಪ್ರತಿಬಂಧಕ ಹಾಕಲಾಗಿದೆ.

ಂ ಂ

ಬರ್ಲಿನ್ನಿನಲ್ಲಿರುವ ಎಲ್ಲಾ ವಿದೇಶೀ ಪ್ರತಿನಿಧಿಗಳೂ ಮ್ಯೂನಿಕ್ಕಿಗೆ ಹೋಗಬೇಕೆಂದು ಆಜ್ಞೆಯಾಗಿದೆ.

ವಿವಿಧ ವರ್ತಮಾನ

ಯುದ್ಧಾನಂತರ ಜರ್ಮಯುಯು ಬಗ್ಗೆ ರಷ್ಯಾ ಸರಕಾರದ ಅಧಿಕಾರ ಪತ್ರಿಕೆಯು, ಹಿಟ್ಲರ್ ಸರ್ಕಾರನವನ್ನು ನಾಶ ಮಾಡಬೇಕೇ ವಿನಃ ಜರ್ಮನಿಯ ಹಂಚಿಕೆ ಮಾಡುವ ಉದ್ದೇಶವಿಲ್ಲವೆಂದೂ, ಆಸ್ಟ್ರಿಯಾ ಬೇರೆ ಮಾಡುವ ಯೋಚನೆ ಇದೆಯೆಂದೂ ಬರೆದಿದೆ.

ಂ ಂ

ಬರ್ಮಾದಲ್ಲಿ ಕಾಂಗ್ ಪಟ್ಟಣವೂ ಅಕ್ಯಾಬ್ ಬಳಿ ಒಂದು ಸಣ್ಣ ದ್ವೀಪವೂ ಬ್ರಿಟಿಷರವಶವಾಯಿತು. ಪಶ್ಚಿಮ ಯೂರೋಪಿನಲ್ಲಿ ಮಿತ್ರಸೇನೆ ಸಿಗ್‌ಫ್ರೈಡ್ ಲೈನಿನವರೆಗೂ ಹೋಗಿದೆ.

ಂ ಂ

ಬರ್ಲಿನ್ ರಕ್ಷಣೆಗೆ ಜರ್ಮನರು ನಗರದ ಸುತ್ತಲೂ ಕಂದಕ ಗುಳಿ ಏರ್ಪಡಿಸಿಕೊಂಡರು.

ಂ ಂ

ಕ್ಯೂಸ್ಟ್ರಿನ್, ಫ್ರೈಲೀ ನಗರಗಳು ರಷ್ಯನ್ನರ ವಶವಾದುವು.

ಂ ಂ

ಓಡರ್ ನದಿ ಸಂಪೂರ್ಣವಾಗಿ ರಷ್ಯನರ ವಶವಾಗುವವರೆಗೆ ಬರ್ಲಿನ್ ಮೇಲೆ ಧಾಳಿ ಇಲ್ಲ.

ಂ ಂ

ಚೀನಾದಲ್ಲಿ ಒಂಟೆ ಚಕ್ರದ ಗಾಡಿ ಇದೆ. ಗ್ಯಾನುಸುಧಾರಣಾ ಕಾರ್ಯಕ್ರಮದಲ್ಲಿ ಇಂತಹವನ್ನೇ ಹೊಂಬಾಯಿ ಸರಕಾರವು ಉಪಯೋಗಿಸಲು ತೀರ್ಮಾನ ಮಾಡಿದೆ.

ಅಮೇರಿಕಾ ಲೈಬ್ರರಿಗಳು

ಮಾನವನ ಜ್ಞಾನಶಕ್ತಿ ಹೆಚ್ಚಲೂ ಬೇಜಾರು ಪರಿಹಾರವಾಗಲೂ ಪುಸ್ತಕಗಳನ್ನು ಓದಬೇಕು. ಇದಕ್ಕಾಗಿ ಪುಸ್ತಕಭಂಡಾರಗಳಿರಬೇಕು. ಅಮೇರಿಕಾದಲ್ಲಿ ಮೊದಲನೆ ಪುಸ್ತಕ ಭಂಡಾರವು 1621 ರಲ್ಲಿ ಸ್ಥಾಪಿತವಾಯಿತು. ವಾಷಿಂಗ್ಟನ್ನಿನಲ್ಲಿ 1653 ರಲ್ಲಿ ಸ್ಥಾಪಿತವಾದ ಪುಸ್ತಕಭಂಡಾರವು ವಿಖ್ಯಾತವಾದದ್ದು. ಹಂಡೆ ಸ್ಪ್ರಿಸಿಂಟಾಗಿದ್ದ ಬೆಂಜಮಿನ್ ಫ್ರಾಂಕ್ಲಿನ್ನನು ಫಿಲಿಡಲ್ಫಿಯಾದಲ್ಲಿ ಪುಸ್ತಕಭಂಡಾರವನ್ನು ಸ್ಥಾಪಿಸಿ ಚಂದಾವಸೂಲ್ಮಾಡಿದನು. ಈಗ ಅಮೇರಿಕಾದಲ್ಲಿ 20 ಸಾವಿರ ಉಚಿತ ಪುಸ್ತಕ ಭಂಡಾರಂಗಳವೆ. ಇವುಗಳಲ್ಲಿ 11 ವರೆ ಕೋಟಿ ಪುಸ್ತಕಗಳವೆ. ಕಾಲೇಜು ವಿಶ್ವವಿದ್ಯಾನಿಲಯದ ಲೈಬ್ರರಿಗಳಲ್ಲಿ 6 ವರೆ ಕೋಟಿ ಪುಸ್ತಕಗಳವೆ.

ಅಮೇರಿಕಾ ಲೈಬ್ರರಿಗಳಲ್ಲಿ ಪುಸ್ತಕಗಳನ್ನು ಮಾತ್ರ ಹಂಚಲವೆಂದು ತಿಳಿಯಬೇಡಿ. ದಿನಪತ್ರಿಕೆಗಳೂ ಮಾಸಪತ್ರಿಕೆಗಳೂ ಪುರಾತನ ಸಂಗೀತಪುಸ್ತಕಗಳೂ ಫಲಂ ಪಟಗಳೂ ಇವೆಲ್ಲಾ ಕೊಡಲಾಗುತ್ತವೆ. ಅನೇಕ ಲೈಬ್ರರಿಗಳಲ್ಲಿ ರೇಡಿಯೋಗಳವೆ. ನಾಟಕಶಾಲೆಗಳವೆ. ಭಾಷಣ ಮಾಡಲು ಪ್ರತ್ಯೇಕ ಕೊಠಡಿಗಳವೆ. 150 ವರ್ಷದಿಂದ ನಡೆದು ಬರುತ್ತಿರುವ ವಾಷಿಂಗ್ಟನ್ ಲೈಬ್ರರಿಯಲ್ಲಿ 60 ಲಕ್ಷ ಪುಸ್ತಕಗಳವೆ. ಕೆಲವು ಲೈಬ್ರರಿಯವರು ಮನೆಗೆ ಪುಸ್ತಕಗಳನ್ನು ಕಳುಹಿಸುವರು. ಹಳ್ಳಿಗಳಿಗೆ ಪುಸ್ತಕಗಳನ್ನು ಲಾಂಚಗಳಲ್ಲಿ ಕೆಗೆದುಕೊಂಡು ಹೋಗಿ ಕೊಡುವರು.

ಅಕ್ಕರ

ಸಾಮಾಜಿಕ ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

Reserved for
OSWAL & CO.

TALK-A-TONE
(The Pioneer Film-mag of S. India)

Local Agent—D. Mahadev
Opera Talkies, Mysore

For Good Printing—
L. N. Press
Srirampet MYSORE

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದ

No. R 5. 1080 / 44-45

ಇಸ್ತಿಹಾರ್ ನಾಮೆ

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ—

ಲಷ್ಕರ್ ಎಮರ್ಜೆನ್ಸಿ ಡಿಪೋವಿನಲ್ಲಿ ರತಕ್ಕ 141 ಪಲ್ಲಾ 95 ಸೇರು **ಹಸಿಕಡಲೆಯನ್ನು** ಈ ಕೆಳಗೆ ರುಜು ಮಾಡಲ್ಪಟ್ಟಿರುವರಿಂದ 5-2-45 ನೇ ತಾರೀಖಿನ ದಿವಸ ಬೆಳಿಗ್ಗೆ 11 ಘಂಟೆಗೆ. ಮೇಲೆ ಹೇಳಿರುವ ಡಿಪೋವಿನಲ್ಲಿ ಬಹಿರಂಗವಾಗಿ ಹರಾಜುಮಾಡಲ್ಪಡುತ್ತದೆ.

ಹರಾಜು ಖೈದಾದ ಮೇಲೆ ಆಖೈರು ಬಿಡ್ಡುದಾರ್ರು ಪೂರ್ತಾ ಮೊಬಲಗನ್ನು ಸ್ಥಳದಲ್ಲಿಯೇ ಪಾವತಿ ಮಾಡತಕ್ಕದ್ದು. ಹಾಗೆ ಮೊಬಲಗನ್ನು ಹಾಜರ್ಮಾಡಲು ತಪ್ಪಿದಲ್ಲಿ ದುಸರಾ ಹರಾಜು ಮಾಡಿಸಿ ಅದರಿಂದಾಗುವ ನಷ್ಟವನ್ನು ಮೊದಲಿನ ಬಿಡ್ಡುದಾರರಿಂದ ಕಂಪಾಯದ ಬಾಕಿಯಂತೆ ವಸೂಲ್ಮಾಡಲ್ಪಡುತ್ತದೆ. ಅದರೆ ದುಸರ ಹರಾಜಿನಲ್ಲಿ ಹೆಚ್ಚಿಗೆ ಉತ್ಪತ್ತಿಯಾದಲ್ಲಿ ನೊದಲಿನ ಬಿಡ್ಡುದಾರರಿಗೆ ಯಾವ ವಿಧವಾದ ಫಾಯಿದೆಯೂ ಕೊಡಲ್ಪಡುವುದಿಲ್ಲ.

ಈ ಸರಕನ್ನು ನೋಡಲು ಲಷ್ಕರ್ ಎಮರ್ಜೆನ್ಸಿ ಡಿಪೋವಿನಲ್ಲಿ 1-2-45 ನೇ ತಾರೀಖಿನಲಾಗಾಯ್ತು ಇಡಲ್ಪಡುತ್ತದೆ.

ಈ ಹರಾಜನ್ನು ನಂಜೂರು ಮಾಡಿದ ಏಳು ದಿವಸಗಳೊಳಗೆ ಸರಕನ್ನು ಸುಫರ್ದು ಪಡೆಯಬೇಕಾಗುವುದು.

ಟಿ. ವಿ. ರೆಡ್ಡಿ
ರೇಷನಿಂಗ್ ಆಫೀಸರ್, ಮೈಸೂರು.

ಮೈಸೂರು ರಣಜಿತ್ ಟಾಕೀಸಿನಲ್ಲಿ 4 ನೇ ವಾರ

At Ranjit ತಕದಿರ್
(ಹಿಂದಿ)

ಚಂದ್ರಮೋಹನ್ — ಮೋತಿಲಾಲ್ — ನರ್ಗೀಸ್
ಬಾಲ್ಕಿ
ಮುಂತಾದವರು ಪಾತ್ರವಹಿಸಿರುವರು
— ದಿನವಹಿ ಮೂರು ಆಟಗಳು —

ರಕ್ತವೃದ್ಧಿಗೆ — ಧಾತುಪುಷ್ಟಿಗೆ
ಶಕ್ತಿಸುಧಾ
ಸೇವನೆಯೇ ಸುಲಭೋಪಾಯ
ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.
ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಅಪೆರಾ ಟಾಕೀಸ್
ದೇವಕನ್ಯ
ಹೊನ್ನಪ್ಪ ಭಾಗವತರ್, ಯು. ಆರ್. ಜೀವರತ್ನಂ, ಟಿ. ಆರ್. ರಾಮಚಂದ್ರ
ಮುಂತಾದವರು ಪಾತ್ರವಹಿಸಿರುವರು.
ಪ್ರತಿ ದಿನ 3 ಆಟಗಳು
— ಶೀಘ್ರದಲ್ಲೇ ಬರುತ್ತದೆ —
ವೈ. ವಿ. ರಾವ್, ಕಮಲಾ ಕೊಟ್ನಿಸ್, ಭಾನುಮತಿ, ನಾರಾಯಣರಾವ್
ಪಾತ್ರವಹಿಸಿರುವ
ತಹಸಿಲ್ದಾರ್
(ತೆಲುಗು ಚಿತ್ರ)

ಅಂದವಾದ ಹೊಲಿಗೆಗೆ
ರೆಡಿಮೇಡ್ ಬಟ್ಟೆಗೆ
— ಸಮ್ಮಲ್ಲಿ ಬನ್ನಿ —
ಶ್ರೀ ಮಹಾಲಕ್ಷ್ಮಿ ಹಾಲ್
ಸಯ್ಯಾಜಿರಾವ್ ರಸ್ತೆ, ಮೈಸೂರು

ಚಿನ್ನಾ ಬೆಳ್ಳಿ ಧಾರಣೆ

ಸವರ್ನ 1 ಕ್ಕೆ	ರೂ. 47-4-0
ಚಿನ್ನ ತೊಲ 1 ಕ್ಕೆ	68-0-0
ಬೆಳ್ಳಿ "	1-4-0

ಸತ್ಯವಾದಿ
— ವಾರದ ಸಂಚಿಕೆ —
ಪರಸ್ಥಳಕ್ಕೆ ವಾರ್ಷಿಕ ಚಂದಾ
ಅಂಚೆವೆಚ್ಚ ಸೇರಿ ರೂ. 1-12-0

Edited, Printed and published by M. S. Krishna Rao, at the Satvavadi Press, Chamaraja Agrahar, Mysore